

ಶಿಲ್ಪಿಯಾಗಿದ್ದ ಅಮರಶಿಲ್ಪಿ ಜಕಣಾಚಾರಿ ಈ ದೇವಾಲಯವನ್ನು ನಿರ್ಮಿಸಿದ ಎನ್ನಲಾಗುತ್ತದೆ. ಸುಮಾರು 1500 ವರ್ಷಗಳ ಹಿಂದೆ ಕದಂಬರು, ಚಾಲುಕ್ಯರು, ಹೊಯ್ಸಳರ ಕಾಲದಲ್ಲಿ ಮಧುಕೇಶ್ವರ ಮಂದಿರ ರೂಪುಗೊಂಡಿದೆ. ಇಲ್ಲಿರುವ ಶಿಲಾಮಂಟಪ ಅತ್ಯಂತ ಸುಂದರವಾಗಿದ್ದು, ಸ್ವಾದಿ ಅರಸರು ಇದನ್ನು ಕಟ್ಟಿಸಿದರು ಎನ್ನುತ್ತದೆ ಇತಿಹಾಸ. ಇಲ್ಲಿ ಉಮಾ ದೇವಿ, ಶಾಂತಲಕ್ಷ್ಮಿ ನರಸಿಂಹನ ವಿಗ್ರಹಗಳು ಗಮನ ಸೆಳೆಯುವಂತಿವೆ. ದೇವಾಲಯದ ಗರ್ಭಗುಡಿಯಲ್ಲಿರುವ ಮಧುಕೇಶ್ವರ ಲಿಂಗ 5.5 ಅಡಿ ಎತ್ತರವಿದ್ದು, ಅದು ತಂಜಾವೂರಿನ ಬೃಹದೀಶ್ವರ ಲಿಂಗದ ನಂತರ ದಕ್ಷಿಣ ಭಾರತದಲ್ಲೇ ಎರಡನೇ ಅತಿದೊಡ್ಡ ಶಿವಲಿಂಗ ಎಂದು ಹೆಸರಾಗಿದೆ. ಲಿಂಗದ ಶಿಲೆಯು ಮಧುವಿನ (ಜೇನುತುಪ್ಪ) ಬಣ್ಣದಲ್ಲಿರುವುದರಿಂದ ಇದಕ್ಕೆ ಮಧುಕೇಶ್ವರ ಎಂಬ ಹೆಸರು ಬಂದಿದೆ.

ಮಧುಕೇಶ್ವರ ದೇವಾಲಯದ ಮುಂಭಾಗದಲ್ಲೇ ಇರುವ ಮಹಾಸ್ಯಂದನ ರಥ ಸುಮಾರು 411 ವರ್ಷಗಳಷ್ಟು ಪುರಾತನವಾದುದು. ಶ್ರೀಗಂಧದ ಮರದಿಂದ ಮಾಡಿದ ರಥವದು. ಸದ್ಯ ಶಿಥಿಲಗೊಂಡಿರುವ ಈ ಮಹಾರಥವನ್ನು ಪುನರ್‌ನಿರ್ಮಿಸುವ ಕೆಲಸ ಆಗಬೇಕಿದೆ.

ದೇವಾಲಯದ ಒಳ ಪ್ರವೇಶಿಸುತ್ತಿದ್ದಂತೆ ಪ್ರತಿಷ್ಠಾಪಿಸಲಾಗಿರುವ 7.5 ಅಡಿ ಎತ್ತರದ ಬೃಹತ್ ನಂದಿ ಭಕ್ತರನ್ನು ಕೈಬೀಸಿ ಕರೆಯುವಂತಿದೆ. ದೇವಾಲಯದ ದಕ್ಷಿಣ ಪಾರ್ಶ್ವದಲ್ಲಿರುವ ಕಲ್ಲಿನ ಮಂಚವು ಮತ್ತೊಂದು ಆಕರ್ಷಣೆ. ಮಂಚದ ಮೇಲೆ ಗಿಳಿ, ಸಿಂಹ, ಆನೆ, ಕಮಲಗಳ ಚಿತ್ರಗಳು ಬಹಳ ಸುಂದರವಾಗಿವೆ. ಇದನ್ನು ಸೋಂದೆಯ ರಘುನಾಥ ನಾಯಕ ಎಂಬಾತ 1628ರಲ್ಲಿ ಮಧುಕೇಶ್ವರನಿಗೆ ಅರ್ಪಿಸಿದ ಎನ್ನುತ್ತದೆ ದಾಖಲೆಗಳು. ಇವಲ್ಲದೆ ಮಧುಕೇಶ್ವರ ದೇಗುಲದ ಸುತ್ತ ಒಟ್ಟು 32 ದೇವಸ್ಥಾನಗಳಿವೆ. ಪ್ರತಿಯೊಂದು ದೇಗುಲವೂ ಚಾರಿತ್ರಿಕ ಮಹತ್ವದಿಂದ, ವಾಸ್ತುಶಿಲ್ಪದ ಅನನ್ಯತೆಯಿಂದ ಗಮನಸೆಳೆಯುವಂತಿದೆ.

### ಬನವಾಸಿಗೆ ಹೋಗುವುದು ಹೇಗೆ?

ಶಿರಸಿಯಿಂದ ಸೊರಬಕ್ಕೆ ಹೋಗುವ ದಾರಿಯಲ್ಲಿ ಸುಮಾರು 30 ಕಿಮೀ ದೂರದಲ್ಲಿದೆ. ಶಿರಸಿ ಬಸ್‌ನಿಲ್ದಾಣದಿಂದ ಬನವಾಸಿಗೆ ಸಾಕಷ್ಟು ಬಸ್‌ಗಳಿವೆ. ಬೆಂಗಳೂರಿನಿಂದ ಶಿರಸಿಗೆ ಖಾಸಗಿ, ಸರ್ಕಾರಿ ಬಸ್‌ಗಳಿವೆ. ಬೆಂಗಳೂರಿನಿಂದ ತಾಳಗುಪ್ಪವರೆಗೆ ರೈಲು ಇದ್ದು, ಅಲ್ಲಿಂದ ಖಾಸಗಿ ವಾಹನ ಅಥವಾ ಬಸ್ ಮೂಲಕವೂ ಹೋಗಬಹುದು.

## ಸಿಗಬೇಕಿದೆ ಕಾಯಕಲ್ಪ

‘ಬನವಾಸಿ ಸುಪ್ರಸಿದ್ಧ ಯಾತ್ರಾ ಸ್ಥಳವಾದರೂ ಪ್ರವಾಸಿಗರಿಗೆ ಬೇಕಾದ ಅಗತ್ಯ ಸವಲತ್ತುಗಳು ಇಲ್ಲಿಲ್ಲ. ಇಲ್ಲಿಗೆ ಬರುವ ಯಾತ್ರಾರ್ಥಿಗಳಿಗೆ ತಂಗಲು ಸುಸಜ್ಜಿತ ಯಾತ್ರಿ ನಿವಾಸ, ಶುದ್ಧ ಕುಡಿಯುವ ನೀರಿನ ಘಟಕ, ಸ್ನಾನ–ಶೌಚಕ್ಕೆ ಶೌಚಗೃಹದ ಅಗತ್ಯವಿದೆ’ ಎನ್ನುತ್ತಾರೆ ಮಧುಕೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ರಾಜಶೇಖರ ಒಡೆಯರ್.

‘ಬನವಾಸಿ ಅಭಿವೃದ್ಧಿ ಪ್ರಾಧಿಕಾರ ಇಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ಕರ್ನಾಟಕ ಪ್ರಾಚ್ಯವಸ್ತು ಇಲಾಖೆ, ಸ್ಥಳೀಯ ಆಡಳಿತದ ವ್ಯವಸ್ಥಾಪನಾ ಸಮಿತಿ ಹಾಗೂ ತಾಲ್ಲೂಕು ಧಾರ್ಮಿಕ ಪರಿಷತ್ತು ಇಲ್ಲಿಯ ಅಭಿವೃದ್ಧಿ ಕಾರ್ಯಗಳಿಗೆ ಒತ್ತಾಸೆ, ಬೆಂಬಲ ನೀಡುತ್ತಿದೆ’ ಎಂದು ವಿವರ ನೀಡುತ್ತಾರೆ ಅವರು.

‘ಇಷ್ಟೆಲ್ಲ ಪರಂಪರೆಯ ತಾಣದಲ್ಲಿ 2000ನೇ ಇಸವಿಯಲ್ಲಿ ಒಂದು ಅನಾಹುತವೂ ನಡೆದುಹೋಗಿ ದೇಗುಲದ ಮುಂದಿನ ಭಾಗದಲ್ಲಿದ್ದ ಬಣ್ಣದ ಛಾವಡಿಗೆ ಬೆಂಕಿಬಿದ್ದು ಸುಟ್ಟುಹೋಯಿತು. ಅದನ್ನೇ ರಿಪೇರಿ ಮಾಡಿ ರಥ ಕಟ್ಟುವ ಸಾಮಗ್ರಿಗಳನ್ನು ಇಡುವ ಉಗ್ರಾಣ ಮಾಡಿದ್ದೇವೆ. ಬನವಾಸಿ ಸಮೀಪದ ಬಂಗ್ಲೆಹಕ್ಕಲು ಎಂಬಲ್ಲಿ ಸುಸಜ್ಜಿತ ವಸ್ತುಸಂಗ್ರಹಾಲಯ ನಿರ್ಮಾಣ ಆಗಿ 12 ವರ್ಷ ಆಗಿದ್ದರೂ ಇನ್ನೂ ಸ್ಥಳಾಂತರ ಆಗಿಲ್ಲ. ಬನವಾಸಿಯ ದೇಗುಲ ಪಕ್ಕದಲ್ಲೇ ಇರುವ ಪಂಪವನದ ಅಭಿವೃದ್ಧಿ ಆಗಬೇಕು. 9 ಎಕರೆ ಜಾಗದಲ್ಲಿ ಈ ವನ ನಿರ್ಮಿಸಲಾಗಿದೆ. ಇವೆಲ್ಲವನ್ನೂ ಸರ್ಕಾರ ಸರಿಯಾಗಿ ನಿರ್ವಹಿಸಿದರೆ ಬನವಾಸಿ ಮತ್ತಷ್ಟು ಪ್ರವಾಸಿಗರನ್ನು ಸೆಳೆಯುವುದರಲ್ಲಿ ಸಂಶಯವಿಲ್ಲ’ ಎಂದು ಹೇಳುತ್ತಾರೆ ಮಧುಕೇಶ್ವರ ದೇವಾಲಯ ಆಡಳಿತ ಸಮಿತಿ ಉಪಾಧ್ಯಕ್ಷ ಶಿವಾನಂದ ದೀಕ್ಷಿತ್.

‘ದೇವಾಲಯದ ಪಕ್ಕದಲ್ಲೇ ಹರಿಯುವ ವರದಾ ನದಿಗೆ ಹೋಗುವ ದಾರಿಯಲ್ಲಿ ಮೆಟ್ಟಿಲು ನಿರ್ಮಿಸಬೇಕು. 12ರಿಂದ 14 ಅಡಿ ನೀರಿರುವ ಅಲ್ಲಿ ಬೋಟಿಂಗ್ ವ್ಯವಸ್ಥೆ ಮಾಡಿದರೆ ಇನ್ನೂ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಬಹುದು’ ಎನ್ನುತ್ತಾರೆ ಶಿವಾನಂದ್.

‘ಬನವಾಸಿಯ ಅಭಿವೃದ್ಧಿಗೆ ಸಹಕಾರ ನೀಡಲಾಗುವುದು, ಇಲ್ಲಿನ ಪಾರಂಪರಿಕ ಸ್ಥಳಗಳ ಮೂಲ ಆಶಯಕ್ಕೆ ಕೊಂಚವೂ ಧಕ್ಕೆಯಾಗದಂತೆ ಪುನಶ್ಚೇತನ ನೀಡಲಾಗುವುದು. ಇದರಿಂದ ಅಂದಿನ ಗತವೈಭವ ಮತ್ತೆ ಮರುಕಳಿಸುವಂತೆ ಮಾಡುವುದು ಸಾಧ್ಯವಾಗುತ್ತದೆ’ ಎಂದು ಹೇಳುತ್ತಾರೆ ಶಿರಸಿಯ ಸಹಾಯಕ ಕಮಿಷನರ್ ಡಾ. ಈಶ್ವರ ಉಳ್ಳಾಗಡ್ಡಿ ಅವರು.